ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಸಂಖ್ಯೆ:ಆರ್‌ಎಸ್‌ಆರ್/ಎಕ್ಸ್‌ಎಂಸಿ/ಸುತ್ತೋಲೆ/168/2014-15. ದಿನಾಂಕ:05-12-2015. 01

## ಸುತ್ತೋಲೆ ಸಂಖ್ಯೆ:-245

ವಿಷಯ:- ಸಹಕಾರ ಸಂಘಗಳ ಅಧಿನಿಯಮ (ತಿದ್ದುಪಡಿ) ಅನುಷ್ಠಾನದ ಬಗ್ಗೆ

---

ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮಾವಳಿಗಳನ್ನು ಸಮಕಾಲೀನ ಔಚಿತ್ಯತೆಗನುಗುಣವಾಗಿ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ ಸಹಕಾರ ಸಂಘಗಳ ಅಧಿನಿಯಮ (ತಿದ್ದುಪಡಿ) ಕಾಯ್ದೆ 2014 ದಿನಾಂಕ 06-9-2014 ರಿಂದ ಜಾರಿಗೆ ಬಂದಿರುತ್ತದೆ.

ಈ ತಿದ್ದುಪಡಿಯ ಅವಕಾಶಗಳನ್ನು ಕೆಲವು ಅಧಿಕಾರಿಗಳು ಕೆಲವು ಸಂದರ್ಭಗಳಲ್ಲಿ ವಿಭಿನ್ನವಾಗಿ ಅರ್ಥೈಸಿಕೊಂಡು ಆದೇಶ ಹೊರಡಿಸುತ್ತಿರುವುದು, ನಿರ್ದೇಶನ ನೀಡುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಇಂತಹ ಆದೇಶಗಳು, ನಿರ್ಣಯಗಳಿಂದ ಇಲಾಖೆಯ ಮೇಲಾಧಿಕಾರಿಗಳಿಗೆ ಇರಿಸುಮುರಿಸುವುಂಟಾಗುವುದರ ಜೊತೆಗೆ ಸಾರ್ವಜನಿಕರಲ್ಲಿ ಹಾಗೂ ಸಹಕಾರ ಸಂಘಗಳಲ್ಲಿ ಗೊಂದಲದ ಸನ್ನಿವೇಶವುಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

1) ಇನ್ನು ಮುಂದೆ ಸಹಕಾರ ಸಂಘಗಳ ನಿಬಂಧಕರ ಅನುಮೋದನೆಯಿಲ್ಲದೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 12(5) ರಡಿಯಲ್ಲಿ ಉಪವಿಧಿ ತಿದ್ದುಪಡಿಗೆ ನಿರ್ದೇಶನ ಹಾಗೂ ಪ್ರಕರಣ 12(6) ಉಪವಿಧಿ ತಿದ್ದುಪಡಿಯನ್ನು ಮಾಡತಕ್ಕದ್ದಲ್ಲ.

2) ಪ್ರಕರಣ 28ಎ ರಲ್ಲಿರುವ ಮೀಸಲಾತಿ ಅವಕಾಶಗಳನ್ನು ಅಧಿನಿಯಮ ಹಾಗೂ ನಿಯಮಗಳಲ್ಲಿ ತಿಳಿಸಿರುವುದನ್ನು ಹೊರತುಪಡಿಸಿ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿ ಉಪವಿಧಿ ತಿದ್ದುಪಡಿ ಮಾಡತಕ್ಕದ್ದಲ್ಲ. ಒಂದು ವೇಳೆ ಈ ವಿಷಯದಲ್ಲಿ ಅವಶ್ಯವೆನಿಸಿದಲ್ಲಿ ಕೇಂದ್ರ ಕಛೇರಿಯಿಂದ ಸ್ಪಷ್ಟೀಕರಣ ಪಡೆಯತಕ್ಕದ್ದು.

3) ಸಹಕಾರ ಸಂಘದ ಆಡಳಿತ ಮಂಡಳಿ, ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ ಕಾನೂನು ಬಳಕೆಯಲ್ಲಿ ಉದ್ಭವಿಸಬಹುದಾದ ಸಂದೇಹ, ಸಂಶಯ, ಗೊಂದಲಗಳಿಗೆ ಸಂಬಂಧಪಟ್ಟಂತೆ ಸರ್ಕಾರ / ನಿಬಂಧಕರು ನೀಡಿರುವ ಸ್ಪಷ್ಟೀಕರಣವೇ ಅಂತಿಮವೆಂದು ಭಾವಿಸತಕ್ಕದ್ದು.

4) ಅಧಿನಿಯಮ, ನಿಯಮಾವಳಿಗಳ ಅನುಷ್ಠಾನದಲ್ಲಿ ಯಾವುದೇ ವಿಷಯದ ಬಗ್ಗೆ ಸ್ವವ್ಯಾಖ್ಯಾನ ಮಾಡತಕ್ಕದ್ದಲ್ಲ. ಅಧಿನಿಯಮದ ವ್ಯಾಖ್ಯಾನವೇ ಅಂತಿಮ.

ಈ ಮೇಲಿನ ಎಲ್ಲಾ ಸೂಚನೆಗಳನ್ನು ಯಥಾವತ್ತಾಗಿ ಪಾಲನೆ ಮಾಡತಕ್ಕದ್ದು.

(ಡಾ:ಎನ್.ಎಸ್.ಚನ್ನಪ್ಪ ಗೌಡ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ:-

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು
3) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
4) ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು
5) ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ.
6) ಕೇಂದ್ರ ಕಛೇರಿಯ ಎಲ್ಲಾ ಶಾಖೆಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರಗಳಿಗೆ ಮಾಹಿತಿಗಾಗಿ.
7) ಸಹಕಾರ ಇಲಾಖಾ ಜಾಲತಾಣ ಶಾಖೆಗೆ ಕಳುಹಿಸುತ್ತಾ ಜಾಲತಾಣದಲ್ಲಿ ಅಳವಡಿಸಲು ಸೂಚಿಸಿದೆ.

ಯ: 2/1